# ಅಳಿವಿನಂಚಿನಲ್ಲಿ ಖಡ್ಗಮೃಗ



**ಸೆಪ್ಟೆಂಬರ್ 22ರಂದು ವಿಶ್ವ ಖಡ್ಗಮೃಗ ದಿನಾಚರಣೆ. ಅಳಿವಿನ ಅಂಚಿನಲ್ಲಿರುವ ಏಕಕೊಂಬಿನ ಖಡ್ಗಮೃಗವನ್ನು ಉಳಿಸುವ ಬಗ್ಗೆ ಇಡೀ ಜಗತ್ತೇ ಚಿಂತಿಸುತ್ತಿದೆ.**

ಚಿತ್ರ– ಲೇಖನ:
**ಆರ್.ಕೆ.ಮಧು**

ಈಶಾನ್ಯ ಭಾರತದ ನಯನ ಮನೋಹರ ಪ್ರಕೃತಿ ಸೌಂದರ್ಯ. ಪ್ರಾಕೃತಿಕ ಹಾಗೂ ಜೀವವೈವಿಧ್ಯತೆಯ ಅಗಾಧ ಸಿರಿ ಅನಾವರಣಗೊಳ್ಳುವುದು ಅಸ್ಸಾಮಿನ ಕಾಜಿರಂಗ ವನ್ಯಜೀವಿಧಾಮದಲ್ಲಿ. ಇಲ್ಲಿನ ರಾಷ್ಟ್ರೀಯ ಉದ್ಯಾನ ಅಳಿವಿನ ಅಂಚಿನಲ್ಲಿರುವ ಒಂದು ಕೊಂಬಿನ ಖಡ್ಗಮೃಗದ ಆವಾಸಸ್ಥಾನ. ಆದರೆ ಈ ಖಡ್ಗಮೃಗಗಳು ವಿನಾಶದ ಹಾದಿಯಲ್ಲಿವೆ. ಈಗಾಗಲೆ ವನ್ಯಜೀವಿ ಸಂರಕ್ಷಣೆಯ ಸಂಸ್ಥೆಯಲ್ಲಿ ಇದರ ಹೆಸರನ್ನು ಕೆಂಪು ಪಟ್ಟಿಗೆ ಸೇರಿಸಲಾಗಿದೆ.

ಈ ಖಡ್ಗಮೃಗ ಯೂನಿಕಾರ್ನಿಸ್ ಎಂಬ ವರ್ಗಕ್ಕೆ ಸೇರಿದ್ದು ತನ್ನ ಮುಖದ ಮೇಲೆ ಒಂದು ಕತ್ತಿಯನ್ನಷ್ಟೆ ಹೊಂದಿದೆ. ಇದರ ಜೀವನವೂ ಈಗ ಕತ್ತಿಯ ಮೇಲಿನ ನಡಿಗೆಯಂತೆ ನಾಜೂಕಾಗಿದೆ. ಕತ್ತಿ ಹಿಡಿದ ಮನುಷ್ಯ ಜೀವರಕ್ಷಣೆ ಮಾಡಿಕೊಳ್ಳುತ್ತಾನೆ; ಆದರೆ ಈ ಮುಗ್ಧ ಪ್ರಾಣಿ ಕತ್ತಿಯಿಂದಾಗಿಯೇ ಜೀವ ಕಳೆದುಕೊಳ್ಳುತ್ತಿದೆ.

ಇಲ್ಲಿನ ಬ್ರಹ್ಮಪುತ್ರಾ ನದಿಯ ಹುಚ್ಚು ಪ್ರವಾಹಕ್ಕೆ ಎದುರಾಗಿ ದಿಟ್ಟತನದಿಂದ ಈಜಿ ದಡ ಸೇರುವ ಈ ಖಡ್ಗಮೃಗ ಮನುಷ್ಯನ ದುರಾಸೆಯ ಕಳ್ಳಬೇಟೆಯ ಪ್ರವಾಹ ಸೆಳೆತಕ್ಕೆ ಸಿಲುಕಿ ಜೀವ ಉಳಿಸಿಕೊಳ್ಳಲು ಆಗುತ್ತಿಲ್ಲ. ಇದರ ಕೊಂಬಿಗೆ ಅಂತರ ರಾಷ್ಟ್ರೀಯ ಮಾರುಕಟ್ಟೆಯಲ್ಲಿ ಚಿನ್ನದ ಬೆಲೆ! ಚೀನಾ ಹಾಗೂ ವಿಯೆಟ್ನಾಂ ದೇಶಗಳಲ್ಲಂತೂ ಇವುಗಳ ಕೊಂಬಿಗೆ ಭಾರೀ ಬೇಡಿಕೆ.

ವಿಶ್ವದಲ್ಲಿರುವ ಒಟ್ಟು ಐದು ಬಗೆಯ ಖಡ್ಗಮೃಗಗಳಲ್ಲಿ ಒಂದು ಕೊಂಬಿನ ಖಡ್ಗಮೃಗವೂ ಸೇರಿದೆ. ಆಫ್ರಿಕಾದಲ್ಲಿ 2 ಕೊಂಬಿನ ಖಡ್ಗಮೃಗವಿದೆ. ಸುಮಾತ್ರ ಖಡ್ಗಮೃಗ, ಬಾಲಿ ಖಡ್ಗಮೃಗ ಮತ್ತು ಬಿಳಿ ಖಡ್ಗಮೃಗಗಳೆಂಬ ಇತರ ಪ್ರಭೇದಗಳೂ ಇವೆ.

ನಮ್ಮ ದೇಶದ ಒಂದು ಕೊಂಬಿನ ಖಡ್ಗಮೃಗದ ಪ್ರಭೇದದಲ್ಲಿ ಗಂಡು ಮತ್ತು ಹೆಣ್ಣುಗಳೆರಡೂ ಕೊಂಬು ಹೊಂದಿರುವುದು ವಿಶೇಷ. ಈ ಕೊಂಬು ಸಾಧಾರಣ 25 ಸೆಂ.ಮೀ ಉದ್ದವಿದ್ದು, ಸುಮಾರು 3 ಕೆ.ಜಿ ತೂಕವಿರುತ್ತದೆ. ದೇಹದ ಮೇಲೆ ಅಲ್ಪ ಪ್ರಮಾಣದ ಕೂದಲಿರುತ್ತವೆ. ಇವುಗಳ ತೂಕ ಸುಮಾರು 2500ದಿಂದ 3500 ಕೆ.ಜಿ!

ಒಂಟಿಕೊಂಬಿನ ಖಡ್ಗಮೃಗ ಸಾಮಾನ್ಯವಾಗಿ ಒಂಟಿಯಾಗಿ ತಿರುಗಾಡುತ್ತದೆ. ಆದರೆ ಮರಿ ಹಾಕುವಾಗ ಮಾತ್ರ ಗುಂಪಿನಲ್ಲಿ ಇರುವುದನ್ನು ಬಯಸುತ್ತದೆ. ಮರಿಗಳು ಅಮ್ಮನೊಡನೆಯೇ ವಾಸಿಸುತ್ತವೆ. ಇವುಗಳ ಆವಾಸ ಸ್ಥಾನ ಸುಮಾರು 28 ಚದರ ಕಿ.ಮೀ ಇರುತ್ತದೆ.

ಗಂಟೆಗೆ 55 ಕಿ.ಮೀ ವೇಗದಲ್ಲಿ ಓಡಬಲ್ಲ ಖಡ್ಗಮೃಗ, ಡಿಕ್ಕಿ ಹೊಡೆದರೆ ಎದುರಿಗೆ ಸಿಗುವ ಪ್ರಾಣಿ ಉಳಿಯುವುದು ಕಷ್ಟ. ಸಾಮಾನ್ಯವಾಗಿ ಖಡ್ಗಮೃಗ 6 ವರ್ಷಕ್ಕೊಮ್ಮೆ ಮರಿ ಹಾಕುತ್ತವೆ. ಗರ್ಭಾವಸ್ಥೆ 15 ತಿಂಗಳು. 40ರಿಂದ 47 ವರ್ಷ ಬದುಕುತ್ತವೆ.




ಕಾಜಿರಂಗ ವನ್ಯಜೀವಿಧಾಮ

ಅಸ್ಸಾಂನ ಕಾಜಿರಂಗ ವನ್ಯಧಾಮ ಖಡ್ಗಮೃಗಗಳ ನೆಚ್ಚಿನ ತಾಣ. ಇಲ್ಲಿ ಸುಮಾರು 2290 ಖಡ್ಗಮೃಗಗಳಿವೆ ಎಂದು ಅಂದಾಜಿಸಲಾಗಿದೆ. ಆದರೆ ಇವುಗಳ ಸಂತತಿ ಕಡಿಮೆಯಾಗುತ್ತಿದ್ದು, ತೀರಾ ಆತಂಕಕಾರಿ ಪರಿಸ್ಥಿತಿಯನ್ನು ಉಂಟು ಮಾಡಿದೆ. ಅಂತರ ರಾಷ್ಟ್ರೀಯ ಮಾರುಕಟ್ಟೆಯಲ್ಲಿ ಇದರ ಕೊಂಬಿಗೆ ಭಾರೀ ಬೆಲೆ ಇದೆ. ಈ ಕೊಂಬುಗಳಿಂದ ಆರೋಗ್ಯವರ್ಧಕ ಔಷಧಗಳನ್ನು ತಯಾರು ಮಾಡಬಹುದು ಎಂಬ ತಪ್ಪು ಗ್ರಹಿಕೆಯೇ ಈ ರೀತಿ ಬೆಲೆ ಬರಲು ಕಾರಣ ಎನ್ನಲಾಗುತ್ತದೆ.